ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 34-43
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೌದ್ಧಧಮ್ಮ: ಸುತ್ತ ಪಿಟಕದ ಮಹತ್ವ ಕುರಿತ ವಿಮರ್ಶಾತ್ಮಕ ಪರಿಶೀಲನೆ

**ಡಾ. ಕಾಳಸ್ವಾಮಿ ಹೆಚ್. ಎನ್**
ಸಂಶೋಧನ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು

***Abstract:***
*ಬೌದ್ಧಧಮ್ಮದ ನೈತಿಕ, ತಾತ್ವಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ತ್ರಿಪಿಟಕಗಳು ಪ್ರಧಾನ ಗ್ರಂಥಗಳಾಗಿರುತ್ತವೆ. ಅದರಲ್ಲಿ ಸುತ್ತ ಪಿಟಕವು ಹೆಚ್ಚಿನ ಮಹತ್ವವನ್ನು ವಿಶ್ಲೇಷಿಸುತ್ತದೆ. ಏಕೆಂದರೆ, ಬೌದ್ಧಧಮ್ಮದ ತ್ರಿಪಿಟಕಗಳಲ್ಲಿ ಪ್ರಮುಖ ಅಂಗವಾಗಿರುವ ಈ ಸುತ್ತ ಪಿಟಕದಲ್ಲಿ ಮಹಾಗುರು ಬುದ್ಧರು ಹಾಗೂ ಅವರ ಶಿಷ್ಯರ ಧರ್ಮೋಪದೇಶಗಳು, ಸಂವಾದಗಳು ಮತ್ತು ಜೀವನ ದರ್ಶನಗಳು ಸಂಗ್ರಹಗೊಂಡಿರುತ್ತವೆ. ಈ ಸುತ್ತ ಪಿಟಕವು ದೀಘ ನಿಕಾಯ, ಮಜ್ಜಿಮ ನಿಕಾಯ, ಸಂಯುತ್ತ ನಿಕಾಯ, ಅಂಗುತ್ತರ ನಿಕಾಯ ಮತ್ತು ಖುದ್ದಕ ನಿಕಾಯ ಎಂಬ ಐದು ನಿಕಾಯಗಳ ಮೂಲಕ ದುಃಖ, ದುಃಖದ ಕಾರಣ, ದುಃಖನಿರೋಧ, ದುಃಖ ನಿವಾರಣೆಯಲ್ಲಿ ಅಷ್ಟಾಂಗಿಕ ಮಾರ್ಗ, ಮಧ್ಯಮ ಮಾರ್ಗ, ಅನಿತ್ಯತೆ, ಅನಾತ್ಮ, ಪ್ರತೀತ್ಯಸಮುತ್ಪಾದ, ಶೀಲ, ಧ್ಯಾನ, ಪ್ರಜ್ಞೆ ಮತ್ತು ನಿರ್ವಾಣದಂತಹ ಮೂಲಭೂತ ಬೌದ್ಧ ಪರಿಕಲ್ಪನೆಗಳು ವಿವರಿಸಲ್ಪಟ್ಟಿರುತ್ತವೆ. ಈ ಸುತ್ತ ಪಿಟಕದ ವಿಶೇಷತೆ ಎಂದರೆ; ಇದು ಕೇವಲ ಧಾರ್ಮಿಕ ಉಪದೇಶಗಳನ್ನು ನೀಡದೆ, ವ್ಯಕ್ತಿಯ ನೈತಿಕ ಪರಿವರ್ತನೆ, ಸಾಮಾಜಿಕ ಹೊಣೆಗಾರಿಕೆ, ಕರುಣೆ, ಅಹಿಂಸೆ, ಸಮಾನತೆ ಮತ್ತು ಮಾನವೀಯ ಮೌಲ್ಯಗಳಿಗೆ ಒತ್ತು ನೀಡುತ್ತದೆ. ಗೃಹಸ್ಥ ಜೀವನ, ಕುಟುಂಬ ಸಂಬಂಧಗಳು, ಮಹಿಳೆಯರ ಆಧ್ಯಾತ್ಮಿಕ ಸ್ಥಾನ ಮತ್ತು ಸಾಮಾಜಿಕ ನಡವಳಿಕೆಯ ಕುರಿತ ಬೋಧನೆಗಳು ಇದರ ಸಾಮಾಜಿಕ ಮಹತ್ವವನ್ನು ಪ್ರತಿಬಿಂಬಿಸುತ್ತವೆ. ಐತಿಹಾಸಿಕ ಮೂಲವಾಗಿ ಬಳಸುವಾಗ ಅದರ ಧಾರ್ಮಿಕ–ಸಾಹಿತ್ಯಿಕ ಸ್ವರೂಪ, ಮೌಖಿಕ ಪರಂಪರೆ ಮತ್ತು ಅನಂತರದ ಸಂಕಲನದ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ವಿಮರ್ಶಾತ್ಮಕ ವಿಶ್ಲೇಷಣೆ ಅಗತ್ಯವಾಗಿದೆ. ಈ ಸುತ್ತ ಪಿಟಕವು ಬೌದ್ಧಧಮ್ಮದ ಮೂಲಭೂತ ತತ್ವಗಳನ್ನು ತಿಳಿಯಲು ಮಾತ್ರವಲ್ಲದೆ, ಪ್ರಾಚೀನ ಭಾರತೀಯ ಸಮಾಜ, ನೈತಿಕತೆ ಮತ್ತು ಧಾರ್ಮಿಕ ಚಿಂತನೆಯ ಅಧ್ಯಯನಕ್ಕೂ ಮಹತ್ವದ ಆಕರವಾಗಿದೆ.*

***Keywords:*** *ಬೌದ್ಧಧಮ್ಮ, ಸುತ್ತ ಪಿಟಕ, ನಿಕಾಯಗಳು, ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗಿಕ ಮಾರ್ಗ, ಮಧ್ಯಮ ಮಾರ್ಗ, ಅನಿತ್ಯತೆ, ಅನಾತ್ಮವಾದ, ಪ್ರತೀತ್ಯಸಮುತ್ಪಾದ, ನಿಬ್ಬಾಣ.*

**ಪೀಠಿಕೆ**

ಬೌದ್ಧಧಮ್ಮದ ತ್ರಿಪಿಟಕಗಳಲ್ಲಿ ಸುತ್ತ ಪಿಟಕವು ಅತ್ಯಂತ ಪ್ರಮುಖವಾದ ಸ್ಥಾನವನ್ನು ಹೊಂದಿದೆ. ವಿನಯ ಪಿಟಕವು ಭಿಕ್ಷು ಸಂಘದ ಶಿಸ್ತು ಮತ್ತು ನಿಯಮಗಳನ್ನು ವಿವರಿಸಿದರೆ, ಅಭಿಧಮ್ಮ ಪಿಟಕವು ಬೌದ್ಧ ತತ್ವಚಿಂತನೆಯ ವಿಶ್ಲೇಷಣಾತ್ಮಕ ಸ್ವರೂಪವನ್ನು ನಿರೂಪಿಸುತ್ತದೆ. ಆದರೆ, ಈ ಸುತ್ತ ಪಿಟಕವು ಮಹಾಗುರು ಬುದ್ಧರ ಉಪದೇಶಗಳು, ಸಂವಾದಗಳು, ನೈತಿಕ ಬೋಧನೆಗಳು, ಧ್ಯಾನ

***Please cite this article as:*** ಕಾಳಸ್ವಾಮಿ ಹೆಚ್. ಎನ್. (2026). ಬೌದ್ಧಧಮ್ಮ: ಸುತ್ತ ಪಿಟಕದ ಮಹತ್ವ ಕುರಿತ ವಿಮರ್ಶಾತ್ಮಕ ಪರಿಶೀಲನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(4), 34–43

ಮಾರ್ಗಗಳು, ಸಾಮಾಜಿಕ ಚಿಂತನೆಗಳು ಮತ್ತು ನಿಬ್ಬಾಣದತ್ತ ಸಾಗುವ ಮಾರ್ಗವನ್ನು ನೇರವಾಗಿ ಪರಿಚಯಿಸುವ ಪ್ರಮುಖ ಗ್ರಂಥ ಸಂಕಲನವಾಗಿರುತ್ತದೆ. ಆದ್ದರಿಂದ ಬುದ್ಧರ ಧಮ್ಮದ ಪ್ರಾಯೋಗಿಕ ಮತ್ತು ನೈತಿಕ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಸುತ್ತ ಪಿಟಕವು ಮೂಲಭೂತ ಆಕರವಾಗಿದೆ. ಸುತ್ತ ಎಂಬ ಪದವು ಸಾಮಾನ್ಯವಾಗಿ ಉಪದೇಶ, ಪ್ರವಚನ ಅಥವಾ ಧಮ್ಮಬೋಧನೆ ಎಂಬ ಅರ್ಥವನ್ನು ನೀಡುತ್ತದೆ. ಸುತ್ತ ಪಿಟಕದಲ್ಲಿರುವ ಅನೇಕ ಸಂವಾದಗಳು ಬುದ್ಧ ಮತ್ತು ಅವರ ಶಿಷ್ಯರು, ಗೃಹಸ್ಥರು, ರಾಜರು, ಬ್ರಾಹ್ಮಣರು, ಇತರ ಧಾರ್ಮಿಕ ಪಂಥಗಳ ಅನುಯಾಯಿಗಳು ಹಾಗೂ ಸಾಮಾನ್ಯ ಜನರ ನಡುವಿನ ಪ್ರಶ್ನೋತ್ತರಗಳ ರೂಪದಲ್ಲಿವೆ. ಇದರಿಂದ ಬೌದ್ಧಧಮ್ಮವು ಕೇವಲ ಭಿಕ್ಷುಗಳಿಗಷ್ಟೇ ಸೀಮಿತವಾಗಿರದೆ, ಸಮಷ್ಠಿ ಸಮಾಜಕ್ಕೆ ಸಂಬಂಧಿಸಿದ ನೈತಿಕ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನವನ್ನು ನೀಡಿದೆ ಎಂಬುದು ಸ್ಪಷ್ಟವಾಗುತ್ತದೆ.

ತ್ರಿಪಿಟಕವು ಬೌದ್ಧಧಮ್ಮದ ಪ್ರಮುಖ ಧಾರ್ಮಿಕ ಮತ್ತು ತಾತ್ವಿಕ ಗ್ರಂಥಸಂಪತ್ತಾಗಿದೆ. ತ್ರಿಪಿಟಕ ಎಂಬ ಪದವು ಮೂರು ಪಿಟಕಗಳು ಅಥವಾ ಮೂರು ಗ್ರಂಥ ಪೆಟ್ಟಿಗೆಗಳು ಎಂಬ ಅರ್ಥವನ್ನು ಹೊಂದಿದೆ. ಗುರು ಬುದ್ಧರ ಪರಿನಿಬ್ಬಾಣದ ಅನಂತರ ಅವರ ಬೋಧನೆಗಳನ್ನು ಸಂರಕ್ಷಿಸಿ, ವ್ಯವಸ್ಥಿತವಾಗಿ ಸಂಕಲಿಸುವ ಪ್ರಕ್ರಿಯೆಯಲ್ಲಿ ಈ ಗ್ರಂಥ ಪರಂಪರೆಯು ರೂಪುಗೊಂಡಿತು. ಪಾಳಿ ಭಾಷೆಯು ಬೌದ್ಧ ಪರಂಪರೆಯ ತ್ರಿಪಿಟಕವನ್ನು, ಅದರಲ್ಲಿಯೂ ಬಹುಮುಖ್ಯವಾಗಿ ವಿನಯ ಪಿಟಕ, ಸುತ್ತ ಪಿಟಕ ಮತ್ತು ಅಭಿಧಮ್ಮ ಪಿಟಕ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ.

**ಬೌದ್ಧಧಮ್ಮ ಗ್ರಂಥಗಳ ಉಗಮ ಮತ್ತು ವಿಕಾಸ**

ಬೌದ್ಧಧಮ್ಮದ ಪ್ರಾರಂಭಿಕ ಹಂತದಲ್ಲಿ ಯಾವುದೇ ಲಿಖಿತ ಗ್ರಂಥ ಪರಂಪರೆಯು ಕೂಡ ಅಸ್ತಿತ್ವದಲ್ಲಿರಲಿಲ್ಲ. ಗುರು ಬುದ್ಧರು ತಮ್ಮ ಉದಾತ್ತ ಸದ್ಗುಣ ಬೋಧನೆಗಳನ್ನು ಸ್ವತಃ ಗ್ರಂಥರೂಪದಲ್ಲಿ ದಾಖಲಿಸಿರುವುದಿಲ್ಲ. ಆದರೆ, ಅವರ ಸಮಷ್ಠಿ ಧರ್ಮೋಪದೇಶಗಳು ಮತ್ತು ಸಂಘದ ನಿಯಮಗಳನ್ನು ಶಿಷ್ಯರು ಮೌಖಿಕ ಪರಂಪರೆಯ ಮೂಲಕ ಸಂರಕ್ಷಿಸಿ ಮುಂದಿನ ತಲೆಮಾರುಗಳಿಗೆ ವರ್ಗಾಯಿಸಿದರು ಎಂಬುದು ತಿಳಿದುಬರುತ್ತದೆ. ಗುರು ಬುದ್ಧರ ಉಪದೇಶಗಳನ್ನು ನಿಖರವಾಗಿ ನೆನಪಿನಲ್ಲಿಟ್ಟುಕೊಳ್ಳಲು ಮತ್ತು ಸಮೂಹವಾಗಿ ಪಠಿಸಲು ಭಿಕ್ಷು ಸಂಘದಲ್ಲಿ ವಿಶೇಷವಾದ ಕಂಠಪಾಠ ಮತ್ತು ಪಠಣ ಪದ್ಧತಿಗಳು ಅಭಿವೃದ್ಧಿಗೊಂಡವು.

ಬೌದ್ಧ ಪರಂಪರೆಯ ಪ್ರಕಾರ; ಬುದ್ಧರ ಮಹಾಪರಿನಿಬ್ಬಾಣದ ಅನಂತರ ರಾಜಗೃಹದಲ್ಲಿ ನಡೆದ ಮೊದಲ ಬೌದ್ಧ ಭಿಕ್ಷು ಸಂಘದಲ್ಲಿ ಅವರ ಧಮ್ಮೋಪದೇಶಗಳು ಮತ್ತು ಸಂಘದ ನಿಯಮಗಳನ್ನು ಕ್ರಮಬದ್ಧವಾಗಿ ಪಠಿಸಲಾಯಿತು. ವಿನಯಕ್ಕೆ ಸಂಬಂಧಿಸಿದ ನಿಯಮಗಳನ್ನು ಉಪಾಲಿ ಮತ್ತು ಧಮ್ಮಕ್ಕೆ ಸಂಬಂಧಿಸಿದ ಉಪದೇಶಗಳನ್ನು ಆನಂದರು ಪಠಿಸಿದರು ಎಂಬುದು ಪರಂಪರೆಯ ವಿವರಣೆಯಾಗಿದೆ. ಆದಾಗ್ಯೂ, ಈ ಭಿಕ್ಷು ಸಂಘವನ್ನು ಕುರಿತ ವಿವರಗಳನ್ನು ಬಳಸುವಾಗ ಅವುಗಳು ಅನಂತರದ ಬೌದ್ಧ ಪರಂಪರೆಗಳಲ್ಲಿ ರೂಪುಗೊಂಡ ಐತಿಹಾಸಿಕ ಸ್ಮರಣೆಗಳು ಎಂಬುದನ್ನು ಗಮನದಲ್ಲಿಟ್ಟುಕೊಳ್ಳುವುದು ಅಗತ್ಯವಾಗಿದೆ. ತರುವಾಯ, ಭಿಕ್ಷುಗಳ ವಿವಿಧ ಪೀಳಿಗೆಗಳು ಈ ಧಮ್ಮ ಬೋಧನೆಗಳನ್ನು ಕಂಠಪಾಠ, ಸಾಮೂಹಿಕ ಪಠಣ ಮತ್ತು ಮೌಖಿಕ ಪ್ರಸಾರದ ಮೂಲಕ ಸಂರಕ್ಷಿಸಿದವು. ಈ ಮೌಖಿಕ ಪರಂಪರೆಯೇ ಅನಂತರದ ಬೌದ್ಧಧಮ್ಮ ಗ್ರಂಥಗಳ ನಿರ್ಮಾಣಕ್ಕೆ ಮೂಲಭೂತ ಆಧಾರವಾಯಿತು.

ವೈಶಾಲಿಯಲ್ಲಿ ನಡೆದ ಎರಡನೇ ಬೌದ್ಧ ಭಿಕ್ಷು ಸಂಘವು ಸಂಘದ ವಿನಯ ನಿಯಮಗಳಿಗೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳಿಂದಾಗಿ ಮಹತ್ವ ಪಡೆದಿರುತ್ತದೆ. ಈ ಸಂದರ್ಭದಲ್ಲಿ ಸಂಘದ ಶಿಸ್ತು ಮತ್ತು ಆಚರಣೆಗಳ ಕುರಿತು ವಿವಿಧ ಅಭಿಪ್ರಾಯಗಳು

ವ್ಯಕ್ತವಾದವು. ಅನಂತರದ ಬೌದ್ಧ ಪರಂಪರೆಗಳು ಈ ಭಿನ್ನಾಭಿಪ್ರಾಯಗಳನ್ನು ವಿವಿಧ ಸಂಘೀಯ ಪರಂಪರೆಗಳ ಬೆಳವಣಿಗೆಯೊಂದಿಗೆ ಸಂಬಂಧಿಸುತ್ತವೆ. ಆದರೆ, ಈ ಎರಡನೇ ಬೌದ್ಧ ಮಹಾಸಮ್ಮೇಳವು ನೇರವಾಗಿ ಎಲ್ಲಾ ಬೌದ್ಧ ಪಂಥಗಳ ಉಗಮಕ್ಕೆ ಕಾರಣವಾಯಿತು ಎಂದು ಸರಳೀಕರಿಸುವುದು ಇತಿಹಾಸಾತ್ಮಕವಾಗಿ ಎಚ್ಚರಿಕೆಯಿಂದ ನೋಡಬೇಕಾದ ವಿಷಯವಾಗಿದೆ.

ಮೂರನೇ ಬೌದ್ಧ ಮಹಾಸಮ್ಮೇಳನವು ಪಾಟಲಿಪುತ್ರ ಮತ್ತು ಮೌರ್ಯ ಚಕ್ರವರ್ತಿ ಅಶೋಕನ ಕಾಲದೊಂದಿಗೆ ಸಂಬಂಧಿಸಿರುತ್ತದೆ. ಥೇರವಾದ ಪರಂಪರೆಯಲ್ಲಿ ಇದಕ್ಕೆ ವಿಶೇಷ ಸ್ಥಾನವಿದೆ. ಈ ಅವಧಿಯಲ್ಲಿ ಬೌದ್ಧ ಭಿಕ್ಷು ಸಂಘದ ಶುದ್ಧೀಕರಣ, ಧಮ್ಮದ ವ್ಯವಸ್ಥಿತ ನಿರೂಪಣೆ ಮತ್ತು ಬೌದ್ಧಧಮ್ಮದ ಪ್ರಸಾರಕ್ಕೆ ಸಂಬಂಧಿಸಿದ ಚಟುವಟಿಕೆಗಳು ನಡೆದವು ಎಂದು ಪರಂಪರೆ ವಿವರಿಸುತ್ತದೆ. ಅನಂತರ ಬೌದ್ಧಧಮ್ಮವು ಶ್ರೀಲಂಕಾ ಸೇರಿದಂತೆ ಭಾರತೀಯ ಉಪಖಂಡದ ಹೊರಗಿನ ಪ್ರದೇಶಗಳಿಗೆ ವ್ಯಾಪಿಸಿತು. ಇದರಿಂದ ಬೌದ್ಧ ಸಾಹಿತ್ಯವು ವಿವಿಧ ಭಾಷೆಗಳಲ್ಲಿ ಮತ್ತು ವಿವಿಧ ಪ್ರಾದೇಶಿಕ ಪರಂಪರೆಗಳಲ್ಲಿ ವಿಕಸನಗೊಳ್ಳಲು ಅವಕಾಶ ದೊರೆಯಿತು.

ಬೌದ್ಧಧಮ್ಮ ಗ್ರಂಥಗಳ ಉಗಮ ಮತ್ತು ವಿಕಾಸವನ್ನು ಸ್ಥೂಲವಾಗಿ ಮೂರು ಪ್ರಮುಖ ಹಂತಗಳಲ್ಲಿ ಅರ್ಥಮಾಡಿಕೊಳ್ಳಬಹುದು. ಅವುಗಳೆಂದರೆ;

**ಮೊದಲನೆಯ ಹಂತ ಮೌಖಿಕ ಪ್ರಸಾರ;** ಬುದ್ಧಗುರುವಿನ ಧಮ್ಮ ಬೋಧನೆಗಳು ಮೊದಲಿಗೆ ಭಿಕ್ಷು ಸಂಘದ ಮೂಲಕ ಕಂಠಪಾಠ ಮತ್ತು ಸಾಮೂಹಿಕ ಪಠಣದ ರೂಪದಲ್ಲಿ ಪ್ರಸಾರಗೊಂಡವು. ಮೌಖಿಕ ಪರಂಪರೆಯಲ್ಲಿ ವಿಷಯಗಳನ್ನು ಪುನರಾವರ್ತನೆ, ಸಂಖ್ಯಾತ್ಮಕ ವರ್ಗೀಕರಣ ಮತ್ತು ನಿರ್ದಿಷ್ಟ ಪಠಣಕ್ರಮಗಳ ಮೂಲಕ ಸಂರಕ್ಷಿಸುವ ವ್ಯವಸ್ಥೆ ರೂಪುಗೊಂಡಿತು.

**ಎರಡನೆಯ ಹಂತ ಸಂಕಲನ ಮತ್ತು ವ್ಯವಸ್ಥಿತ ಜೋಡಣೆ:** ಕಾಲಕ್ರಮೇಣ ವಿವಿಧ ಧಮ್ಮೋಪದೇಶಗಳು, ವಿನಯ ನಿಯಮಗಳು ಮತ್ತು ತಾತ್ವಿಕ ವಿವರಣೆಗಳನ್ನು ವಿಷಯಾನುಸಾರವಾಗಿ ಸಂಗ್ರಹಿಸಿ ವ್ಯವಸ್ಥಿತವಾಗಿ ಜೋಡಿಸಲಾಯಿತು. ಇದೇ ಪ್ರಕ್ರಿಯೆಯಲ್ಲಿ ವಿನಯ, ಧಮ್ಮ ಮತ್ತು ನಂತರ ಅಭಿಧಮ್ಮಕ್ಕೆ ಸಂಬಂಧಿಸಿದ ಪ್ರತ್ಯೇಕ ಸಾಹಿತ್ಯ ಪರಂಪರೆಗಳು ರೂಪುಗೊಂಡವು.

**ಮೂರನೆಯ ಹಂತ ಲಿಖಿತ ಸಂರಕ್ಷಣೆ ಮತ್ತು ಅನುವಾದ:** ಮೌಖಿಕವಾಗಿ ದೀರ್ಘಕಾಲ ಸಂರಕ್ಷಿಸಲ್ಪಟ್ಟ ಬೌದ್ಧ ಧಮ್ಮಬೋಧನೆಗಳು ಅನಂತರ ಲಿಖಿತ ರೂಪಕ್ಕೆ ಬಂದವು. ಥೇರವಾದ ಪರಂಪರೆಯ ಪ್ರಕಾರ, ಶ್ರೀಲಂಕಾದಲ್ಲಿ ಕ್ರಿ.ಪೂ. ಮೊದಲ ಶತಮಾನದಲ್ಲಿ ಪಾಳಿ ತ್ರಿಪಿಟಕವನ್ನು ಲಿಖಿತ ರೂಪದಲ್ಲಿ ದಾಖಲಿಸಲಾಯಿತು ಎಂದು ಪರಂಪರೆ ತಿಳಿಸುತ್ತದೆ. ಅನಂತರ ಬೌದ್ಧ ಸಾಹಿತ್ಯವು ಪಾಳಿ, ಸಂಸ್ಕೃತ, ಪ್ರಾಕೃತ, ಚೀನೀ, ಟಿಬೇಟಿಯನ್ ಮತ್ತು ಇತರ ಭಾಷೆಗಳಲ್ಲಿ ಸಂರಕ್ಷಿಸಲ್ಪಟ್ಟು ಅನುವಾದಗೊಂಡಿತು.

ಬೌದ್ಧಧಮ್ಮ ಗ್ರಂಥಗಳ ಬೆಳವಣಿಗೆಯು ಒಂದೇ ಕಾಲದಲ್ಲಿ ನಡೆದ ಒಂದು ಘಟನೆಯ ಫಲವಲ್ಲ. ಮೌಖಿಕ ಸಂರಕ್ಷಣೆ, ಪಠಣ, ಸಂಕಲನ, ಸಂಘೀಯ ಪರಂಪರೆಗಳ ವಿಕಾಸ, ಲಿಖಿತ ರೂಪಾಂತರ ಮತ್ತು ಅನುವಾದ ಇವೆಲ್ಲವೂ ಸೇರಿ ದೀರ್ಘಕಾಲದ ಐತಿಹಾಸಿಕ ಪ್ರಕ್ರಿಯೆಯಾಗಿ ಬೌದ್ಧಧಮ್ಮ ಗ್ರಂಥಗಳ ರೂಪುಗೊಳಿಸುವಿಕೆಯನ್ನು ಅರ್ಥಮಾಡಿಕೊಳ್ಳಬೇಕು.

**ತ್ರಿಪಿಟಕ:** ತಿಟಿಪಿಟಕ ಎಂಬುದು ಪಾಳಿ ರೂಪವಾಗಿದ್ದು, ಸಂಸ್ಕೃತದಲ್ಲಿ ಇದನ್ನು ತ್ರಿಪಿಟಕ ಎಂದು ಕರೆಯಲಾಗುತ್ತದೆ. ತ್ರಿ ಎಂದರೆ; ಮೂರು ಮತ್ತು ಪಿಟಕ ಎಂದರೆ; ಬುಟ್ಟಿ ಅಥವಾ ಸಂಗ್ರಹಪಾತ್ರೆ. ಆದ್ದರಿಂದ ತ್ರಿಪಿಟಕ ಎಂದರೆ; ಅಕ್ಷರಶಃ ಮೂರು ಪಿಟಕಗಳು ಅಥವಾ ಮೂರು ಸಂಗ್ರಹಗಳು ಎಂಬ ಅರ್ಥವನ್ನು ನೀಡುತ್ತದೆ. ಥೇರವಾದ ಬೌದ್ಧ ಪರಂಪರೆಯ ಪಾಳಿ ತ್ರಿಪಿಟಕವು ಮುಖ್ಯವಾಗಿ

ಮೂರು ವಿಭಾಗಗಳನ್ನು ಒಳಗೊಂಡಿದೆ. ವಿನಯ ಪಿಟಕ, ಸುತ್ತ ಪಿಟಕ, ಅಭಿಧಮ್ಮ ಪಿಟಕ. ಈ ಮೂರು ವಿಭಾಗಗಳು ಕ್ರಮವಾಗಿ ಬೌದ್ಧ ಸಂಘದ ಶಿಸ್ತು, ಬುದ್ಧಗುರುವಿನ ಧಮ್ಮೋಪದೇಶಗಳು ಮತ್ತು ಧಮ್ಮದ ವಿಶ್ಲೇಷಣಾತ್ಮಕ–ತಾತ್ವಿಕ ನಿರೂಪಣೆಯನ್ನು ಪ್ರತಿನಿಧಿಸುತ್ತವೆ.

**ವಿನಯ ಪಿಟಕ:** ವಿನಯ ಪಿಟಕವು ಭಿಕ್ಷು ಮತ್ತು ಭಿಕ್ಷುಣಿಯರ ಸಂಘಜೀವನವನ್ನು ನಿಯಂತ್ರಿಸುವ ನಿಯಮಗಳು ಮತ್ತು ನಿಬಂಧನೆಗಳ ಸಂಕಲನವಾಗಿದೆ. ಬೌದ್ಧ ಸಂಘವು ಒಂದು ಸುವ್ಯವಸ್ಥಿತ ಧಾರ್ಮಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ನಡವಳಿಕೆ, ಶಿಸ್ತು ಮತ್ತು ಸಂಘೀಯ ಕಾರ್ಯವಿಧಾನಗಳನ್ನು ಇದು ವಿವರಿಸುತ್ತದೆ. ವಿನಯ ಪಿಟಕದಲ್ಲಿ ಮುಖ್ಯವಾಗಿ; ಭಿಕ್ಷು ಮತ್ತು ಭಿಕ್ಷುಣಿಯರ ಶಿಸ್ತು; ಸಂಘಕ್ಕೆ ಪ್ರವೇಶ ಪಡೆಯುವ ನಿಯಮಗಳು; ಪಾತಿಮೊಕ್ಕಕ್ಕೆ ಸಂಬಂಧಿಸಿದ ನಿಯಮಗಳು; ಅಪರಾಧಗಳ ವರ್ಗೀಕರಣ ಮತ್ತು ಶಿಸ್ತು ಕ್ರಮಗಳು; ಆಹಾರ, ವಸ್ತ್ರ ಮತ್ತು ವಸತಿಗೆ ಸಂಬಂಧಿಸಿದ ನಿಯಮಗಳು; ಸಂಘದ ಆಂತರಿಕ ವಿವಾದಗಳನ್ನು ಪರಿಹರಿಸುವ ವಿಧಾನಗಳು; ಭಿಕ್ಷು–ಭಿಕ್ಷುಣಿಯರ ಪರಸ್ಪರ ಸಂಬಂಧಗಳು; ಸಂಘ ಮತ್ತು ಗೃಹಸ್ಥ ಸಮಾಜದ ನಡುವಿನ ಸಂಬಂಧಗಳು ಮುಂತಾದ ವಿಷಯಗಳು ಒಳಗೊಂಡಿವೆ. ವಿನಯ ಪಿಟಕವು ಕೇವಲ ಧಾರ್ಮಿಕ ನಿಯಮಗಳ ಸಂಕಲನವಲ್ಲ. ಇದು ಪ್ರಾಚೀನ ಬೌದ್ಧ ಸಂಘದ ಸಾಂಸ್ಥಿಕ ಇತಿಹಾಸ, ದೈನಂದಿನ ಜೀವನ ಮತ್ತು ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ಮಾಡಲು ಪ್ರಮುಖ ಮೂಲವಾಗಿದೆ. ಸಂಘದ ಆಂತರಿಕ ವ್ಯವಸ್ಥೆ ಮತ್ತು ಭಿಕ್ಷುಗಳು ಸಾಮಾನ್ಯ ಜನರೊಂದಿಗೆ ಹೊಂದಿದ್ದ ಸಂಬಂಧಗಳ ಕುರಿತೂ ಇದರಿಂದ ಮಾಹಿತಿಯನ್ನು ಪಡೆಯಬಹುದು.

**ಸುತ್ತ ಪಿಟಕ:** ಸುತ್ತ ಪಿಟಕವು ಗುರು ಬುದ್ಧರಿಗೆ ಸಂಬಂಧಿಸಿದ ಧಮ್ಮೋಪದೇಶಗಳು ಹಾಗೂ ಕೆಲವು ಸಂದರ್ಭಗಳಲ್ಲಿ ಪ್ರಮುಖ ಶಿಷ್ಯರ ಬೋಧನೆಗಳನ್ನು ಒಳಗೊಂಡಿರುವ ವಿಶಾಲ ಸಂಕಲನವಾಗಿದೆ. ಇದು ಬೌದ್ಧಧಮ್ಮದ ನೈತಿಕ, ತಾತ್ವಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳ ಪ್ರಮುಖ ಮೂಲವಾಗಿದೆ. ಪಾಳಿ ಸುತ್ತ ಪಿಟಕವನ್ನು ಸಾಂಪ್ರದಾಯಿಕವಾಗಿ ಐದು ನಿಕಾಯಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ; ದೀಘ ನಿಕಾಯವು; ದೀರ್ಘ ಪ್ರವಚನಗಳ ಸಂಗ್ರಹವನ್ನು, ಮಜ್ಝಿಮ ನಿಕಾಯವು; ಮಧ್ಯಮ ಉದ್ದದ ಪ್ರವಚನಗಳ ಸಂಗ್ರಹವನ್ನು, ಸಂಯುತ್ತ ನಿಕಾಯವು; ವಿಷಯಾನುಸಾರ ಸಂಪರ್ಕಿಸಲಾದ ಪ್ರವಚನಗಳನ್ನು, ಅಂಗುತ್ತರ ನಿಕಾಯವು; ಸಂಖ್ಯಾತ್ಮಕ ಕ್ರಮದಲ್ಲಿ ವ್ಯವಸ್ಥಿತಗೊಳಿಸಿದ ಪ್ರವಚನಗಳನ್ನು ಮತ್ತು ಖುದ್ದಕ ನಿಕಾಯವು ವಿವಿಧ ಸಣ್ಣ ಮತ್ತು ಸ್ವತಂತ್ರ ಗ್ರಂಥಗಳ ಸಂಕಲನಗಳನ್ನು ಹೊಂದಿರುತ್ತದೆ. ಸುತ್ತ ಪಿಟಕದಲ್ಲಿ ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗಿಕ ಮಾರ್ಗ, ಮಧ್ಯಮ ಮಾರ್ಗ, ಅನಿತ್ಯತೆ, ಅನಾತ್ಮ, ಪ್ರತೀತ್ಯಸಮುತ್ಪಾದ, ಕರ್ಮ, ಧ್ಯಾನ, ಶೀಲ, ಕರುಣೆ ಮತ್ತು ನಿಬ್ಬಾಣದಂತಹ ಪ್ರಮುಖ ಬೌದ್ಧ ಪರಿಕಲ್ಪನೆಗಳನ್ನು ವಿವರಿಸಲಾಗಿದೆ. ಇದರ ಜೊತೆಗೆ ಗೃಹಸ್ಥರ ಕರ್ತವ್ಯ, ಕುಟುಂಬ ಜೀವನ, ಸಾಮಾಜಿಕ ಹೊಣೆಗಾರಿಕೆ, ನೈತಿಕ ನಡವಳಿಕೆ ಮತ್ತು ಮಾನವ ಸಂಬಂಧಗಳ ಕುರಿತೂ ಅನೇಕ ಬೋಧನೆಗಳಿವೆ. ಸುತ್ತ ಪಿಟಕವು ಕೇವಲ ಆಧ್ಯಾತ್ಮಿಕ ಗ್ರಂಥವಲ್ಲದೆ, ಪ್ರಾಚೀನ ಭಾರತೀಯ ಸಮಾಜ ಮತ್ತು ಬೌದ್ಧ ನೈತಿಕತೆಯನ್ನು ಅಧ್ಯಯನ ಮಾಡುವ ಪ್ರಮುಖ ಆಕರವಾಗಿರುತ್ತದೆ.

**ಅಭಿಧಮ್ಮ ಪಿಟಕ:** ಅಭಿಧಮ್ಮ ಪಿಟಕವು ಬೌದ್ಧಧಮ್ಮದ ಹೆಚ್ಚು ವ್ಯವಸ್ಥಿತ, ವಿಶ್ಲೇಷಣಾತ್ಮಕ ಮತ್ತು ತಾತ್ವಿಕ ನಿರೂಪಣೆಯನ್ನು ಒಳಗೊಂಡಿದೆ. ಮನಸ್ಸು, ಚಿತ್ತ, ಮಾನಸಿಕ ಸ್ಥಿತಿಗಳು, ಧಮ್ಮಗಳು, ಜ್ಞಾನ ಮತ್ತು ನೈತಿಕ ವರ್ಗೀಕರಣಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವುದು ಇದರ ಪ್ರಮುಖ ಲಕ್ಷಣವಾಗಿದೆ. ಥೇರವಾದ ಪಾಳಿ ಪರಂಪರೆಯಲ್ಲಿ ಅಭಿಧಮ್ಮ ಪಿಟಕವು ಏಳು ಗ್ರಂಥಗಳನ್ನು ಒಳಗೊಂಡಿದೆ. ಧಮ್ಮಸಂಗಣಿ, ವಿಭಂಗ, ಧಾತುಕಥಾ, ಪುಗ್ಗಲಪಞ್ಞತ್ತಿ, ಕಥಾವತ್ತು, ಯಮಕ,

ಪಟ್ಠಾನ. ಅಭಿಧಮ್ಮ ಸಾಹಿತ್ಯವು ಬೌದ್ಧ ಚಿಂತನೆಯ ಕ್ರಮೇಣ ನಡೆದ ಬೌದ್ಧಿಕ ವ್ಯವಸ್ಥಿತೀಕರಣವನ್ನು ಪ್ರತಿಬಿಂಬಿಸುತ್ತದೆ. ಮಾನವ ಮನಸ್ಸು ಮತ್ತು ಅನುಭವವನ್ನು ವಿವಿಧ ಧಮ್ಮಗಳ ಆಧಾರದ ಮೇಲೆ ವಿಶ್ಲೇಷಿಸುವ ಪ್ರಯತ್ನವು ಇದರ ವಿಶೇಷತೆಯಾಗಿದೆ. ಆದರೆ ಅಭಿಧಮ್ಮ ಪಿಟಕದಲ್ಲಿನ ಎಲ್ಲ ಗ್ರಂಥಗಳೂ ಗುರು ಬುದ್ಧರ ಕಾಲದಲ್ಲಿಯೇ ರೂಪುಗೊಂಡವು ಎಂದು ಪರಿಗಣಿಸುವುದು ಸೂಕ್ತವಲ್ಲ. ಇವು ಬೌದ್ಧ ಸಮುದಾಯದಲ್ಲಿ ಕಾಲಕ್ರಮೇಣ ಬೆಳೆಯುತ್ತಿದ್ದ ತಾತ್ವಿಕ ಮತ್ತು ವಿಶ್ಲೇಷಣಾತ್ಮಕ ಪರಂಪರೆಯ ಫಲವೆಂದು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡುವುದು ಅಗತ್ಯ.

ತ್ರಿಪಿಟಕವು ಬೌದ್ಧಧಮ್ಮದ ಮೂಲಭೂತ ತತ್ವ, ಆಚರಣೆ, ಸಂಘಜೀವನ ಮತ್ತು ಆಧ್ಯಾತ್ಮಿಕ ಸಾಧನೆಗಳನ್ನು ಸಮಗ್ರವಾಗಿ ಪ್ರತಿಬಿಂಬಿಸುವ ಮಹತ್ವದ ಗ್ರಂಥಸಂಪತ್ತಾಗಿದೆ. ಇದರ ಮೂರು ವಿಭಾಗಗಳಾದ ವಿನಯ ಪಿಟಕ, ಸುತ್ತ ಪಿಟಕ ಮತ್ತು ಅಭಿಧಮ್ಮ ಪಿಟಕಗಳು ವಿಷಯದಲ್ಲಿ ವಿಭಿನ್ನವಾಗಿದ್ದರೂ ಪರಸ್ಪರ ಪೂರಕವಾಗಿವೆ. ವಿನಯ ಪಿಟಕವು ಭಿಕ್ಷು–ಭಿಕ್ಷುಣಿಯರ ಸಂಘ ಜೀವನವನ್ನು ನಿಯಂತ್ರಿಸುವ ನಿಯಮಗಳು, ಶಿಸ್ತು, ಸಂಘದ ಕಾರ್ಯವಿಧಾನ ಮತ್ತು ವಿಹಾರ ವ್ಯವಸ್ಥೆಯನ್ನು ವಿವರಿಸುವ ಮೂಲಕ ಬೌದ್ಧ ಸಂಘದ ಸಾಂಸ್ಥಿಕ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಪ್ರಮುಖ ಆಕರವಾಗಿದೆ. ಸುತ್ತ ಪಿಟಕವು ಗುರು ಬುದ್ಧರ ಧಮ್ಮೋಪದೇಶಗಳು ಮತ್ತು ಪ್ರಮುಖ ಶಿಷ್ಯರ ಬೋಧನೆಗಳನ್ನು ಒಳಗೊಂಡಿದ್ದು, ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗಿಕ ಮಾರ್ಗ, ಮಧ್ಯಮ ಮಾರ್ಗ, ಕರ್ಮ, ಅನಿತ್ಯತೆ, ಅನಾತ್ಮ, ಪ್ರತೀತ್ಯಸಮುತ್ಪಾದ, ಧ್ಯಾನ, ಶೀಲ, ಕರುಣೆ ಮತ್ತು ನಿಬ್ಬಾಣದಂತಹ ಬೌದ್ಧಧಮ್ಮದ ಮೂಲಭೂತ ವಿಚಾರಗಳನ್ನು ವಿವರಿಸುತ್ತದೆ. ಇದರ ಜೊತೆಗೆ ಗೃಹಸ್ಥ ಜೀವನ, ಕುಟುಂಬ ಸಂಬಂಧಗಳು, ಸಾಮಾಜಿಕ ಹೊಣೆಗಾರಿಕೆ ಮತ್ತು ನೈತಿಕ ಮೌಲ್ಯಗಳ ಕುರಿತೂ ಮಾರ್ಗದರ್ಶನ ನೀಡುತ್ತದೆ. ಅಭಿಧಮ್ಮ ಪಿಟಕವು ಧಮ್ಮದ ಹೆಚ್ಚು ವ್ಯವಸ್ಥಿತ ಮತ್ತು ವಿಶ್ಲೇಷಣಾತ್ಮಕ ನಿರೂಪಣೆಯನ್ನು ನೀಡುತ್ತಿದ್ದು, ಚಿತ್ತ, ಮಾನಸಿಕ ಸ್ಥಿತಿಗಳು, ಧಮ್ಮಗಳು ಮತ್ತು ನೈತಿಕ ವರ್ಗೀಕರಣಗಳ ಮೂಲಕ ಬೌದ್ಧ ತತ್ವಶಾಸ್ತ್ರ ಹಾಗೂ ಮನೋವೈಜ್ಞಾನಿಕ ಚಿಂತನೆಯ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತದೆ.

ಬೌದ್ಧಧಮ್ಮ ಗ್ರಂಥಗಳ ಉಗಮ ಮತ್ತು ವಿಕಾಸವು ಮೌಖಿಕ ಪರಂಪರೆಯಿಂದ ಲಿಖಿತ ಪರಂಪರೆಗೆ ನಡೆದ ದೀರ್ಘಕಾಲೀನ ಐತಿಹಾಸಿಕ ಪ್ರಕ್ರಿಯೆಯಾಗಿದೆ. ಗುರು ಬುದ್ಧರ ಉದಾತ್ತ ಸದ್ಗುಣ ಬೋಧನೆಗಳು ಆರಂಭದಲ್ಲಿ ಶಿಷ್ಯರ ಮೂಲಕ ಕಂಠಪಾಠ ಮತ್ತು ಪಠಣದ ರೂಪದಲ್ಲಿ ಸಂರಕ್ಷಿಸಲ್ಪಟ್ಟು, ಅನಂತರ ವಿವಿಧ ಸಂಘೀಯ ಪರಂಪರೆಗಳ ಮೂಲಕ ಸಂಕಲಿಸಲ್ಪಟ್ಟವು. ಕಾಲಕ್ರಮೇಣ ಅವು ಲಿಖಿತ ರೂಪವನ್ನು ಪಡೆದುಕೊಂಡು ವಿವಿಧ ಭಾಷೆಗಳಿಗೆ ಅನುವಾದಗೊಂಡವು.

**ಸುತ್ತ ಪಿಟಕದ ಸ್ವರೂಪ:** ಸುತ್ತ ಪಿಟಕವು ಗುರು ಬುದ್ಧರ ಧಮ್ಮೋಪದೇಶಗಳ ವಿಶಾಲ ಸಂಗ್ರಹವಾಗಿದೆ. ಇಲ್ಲಿ ಮಾನವ ಜೀವನದ ಮೂಲಭೂತ ಸಮಸ್ಯೆಯಾದ ದುಃಖ, ಅದರ ಕಾರಣ, ದುಃಖ ನಿರೋಧದ ಸಾಧ್ಯತೆ ಮತ್ತು ಅದಕ್ಕೆ ದಾರಿಯಾದ ಮಾರ್ಗವನ್ನು ವಿವಿಧ ಸಂದರ್ಭಗಳಲ್ಲಿ ವಿವರಿಸಲಾಗಿದೆ. ಸುತ್ತ ಪಿಟಕದ ಪ್ರಮುಖ ವಿಚಾರಗಳನ್ನು ಹೀಗೆ ಗುರುತಿಸಬಹುದು; ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗಿಕ ಮಾರ್ಗ, ಮಧ್ಯಮ ಮಾರ್ಗ, ಅನಿತ್ಯತೆ, ಅನಾತ್ಮವಾದ, ಪ್ರತೀತ್ಯಸಮುತ್ಪಾದ, ಶೀಲ, ಸಮಾಧಿ ಮತ್ತು ಪ್ರಜ್ಞೆ, ಧ್ಯಾನ ಮತ್ತು ಮಾನಸಿಕ ಶುದ್ಧೀಕರಣ, ಮೈತ್ರಿ, ಕರುಣೆ, ಮುದಿತಾ ಮತ್ತು ಉಪೇಕ್ಷೆ, ಗೃಹಸ್ಥರ ನೈತಿಕ ಜೀವನ, ಸಾಮಾಜಿಕ ಹೊಣೆಗಾರಿಕೆ, ನಿಬ್ಬಾಣ ಮತ್ತು ಬಿಡುಗಡೆ.

**ಸುತ್ತ ಪಿಟಕದ ಐದು ನಿಕಾಯಗಳು:** ಪಾಳಿ ಪರಂಪರೆಯಲ್ಲಿ ಸುತ್ತ ಪಿಟಕವನ್ನು ಐದು ಪ್ರಮುಖ

ನಿಕಾಯಗಳಾಗಿ ವಿಂಗಡಿಸಲಾಗಿರುತ್ತದೆ. ದೀಘ ನಿಕಾಯ, ಮಜ್ಝಿಮ ನಿಕಾಯ, ಸಂಯುತ್ತ ನಿಕಾಯ, ಅಂಗುತ್ತರ ನಿಕಾಯ, ಖುದ್ದಕ ನಿಕಾಯ, ಈ ಐದು ನಿಕಾಯಗಳು ಗುರು ಬುದ್ಧರ ಧಮ್ಮ ಬೋಧನೆಯ ವಿವಿಧ ಆಯಾಮಗಳನ್ನು ಪರಿಚಯಿಸುತ್ತವೆ. ಅವುಗಳ ವಿವರಣೆಯನ್ನು ಈ ಮುಂದಿನಂತೆ ನೀಡಲಾಗಿರುತ್ತದೆ.

**ದೀಘಾ ನಿಕಾಯ:** ದೀಘಾ ನಿಕಾಯ ಎಂದರೆ; ದೀರ್ಘ ಪ್ರವಚನಗಳ ಸಂಗ್ರಹ ಎಂಬ ಅರ್ಥ. ಇದು ಸುತ್ತ ಪಿಟಕದ ಮೊದಲ ನಿಕಾಯವಾಗಿದ್ದು, ದೀರ್ಘವಾದ ಸಂವಾದಗಳು ಮತ್ತು ಧಮ್ಮೋಪದೇಶಗಳನ್ನು ಒಳಗೊಂಡಿರುತ್ತದೆ. ದೀಘಾ ನಿಕಾಯದಲ್ಲಿ ಧಾರ್ಮಿಕ, ನೈತಿಕ, ತತ್ವಶಾಸ್ತ್ರೀಯ ಮತ್ತು ಸಾಮಾಜಿಕ ವಿಚಾರಗಳ ಕುರಿತು ವಿಸ್ತೃತ ಚರ್ಚೆ ಕಂಡುಬರುತ್ತದೆ. ಬ್ರಹ್ಮಜಾಲ ಸುತ್ತ, ಸಾಮಞ್ಞಫಲ ಸುತ್ತ, ಮಹಾಪರಿನಿಬ್ಬಾಣ ಸುತ್ತ, ಸಿಗಾಲೋವಾದ ಸುತ್ತಗಳು ಇದರ ಪ್ರಮುಖ ಸುತ್ತಗಳಾಗಿರುತ್ತವೆ. ಬ್ರಹ್ಮಜಾಲ ಸುತ್ತ ವಿವಿಧ ತತ್ವಶಾಸ್ತ್ರೀಯ ದೃಷ್ಟಿಕೋನಗಳನ್ನು ವಿಮರ್ಶಿಸುತ್ತದೆ. ಸಾಮಞ್ಞಫಲ ಸುತ್ತ ಸನ್ಯಾಸ ಜೀವನದ ಫಲಗಳನ್ನು ವಿವರಿಸುತ್ತದೆ. ಮಹಾಪರಿನಿಬ್ಬಾಣ ಸುತ್ತ ಗುರು ಬುದ್ಧರ ಅಂತಿಮ ದಿನಗಳು ಮತ್ತು ಮಹಾಪರಿನಿಬ್ಬಾಣದ ಘಟನೆಗಳನ್ನು ವಿವರಿಸುವುದರಿಂದ ಐತಿಹಾಸಿಕವಾಗಿ ಮಹತ್ವದ್ದಾಗಿದೆ. ಸಿಗಾಲೋವಾದ ಸುತ್ತ ಗೃಹಸ್ಥರ ಸಾಮಾಜಿಕ ಮತ್ತು ನೈತಿಕ ಕರ್ತವ್ಯಗಳನ್ನು ವಿವರಿಸುತ್ತದೆ. ಪೋಷಕರು–ಮಕ್ಕಳು, ಗುರು–ಶಿಷ್ಯರು, ಸ್ನೇಹಿತರು, ಪತ–ಪತ್ನಿ ಮತ್ತು ಉದ್ಯೋಗದಾತ–ಕಾರ್ಮಿಕರ ನಡುವಿನ ಪರಸ್ಪರ ಕರ್ತವ್ಯಗಳ ಕುರಿತು ಇಲ್ಲಿ ಮಾರ್ಗದರ್ಶನ ನೀಡಲಾಗಿದೆ.

**ಮಜ್ಝಿಮ ನಿಕಾಯ:** ಮಜ್ಝಿಮ ನಿಕಾಯವು ಮಧ್ಯಮ ಉದ್ದದ ಪ್ರವಚನಗಳ ಸಂಗ್ರಹವಾಗಿದೆ. ಇದು ಗುರು ಬುದ್ಧರ ಧಮ್ಮೋಪದೇಶಗಳ ಅತ್ಯಂತ ಪ್ರಮುಖ ವಿಭಾಗಗಳಲ್ಲಿ ಒಂದಾಗಿದೆ. ಇದರಲ್ಲಿ ಧ್ಯಾನ, ನೈತಿಕತೆ, ಜ್ಞಾನ, ಆತ್ಮಶುದ್ಧೀಕರಣ ಮತ್ತು ಬಿಡುಗಡೆಯನ್ನು ಕುರಿತು ಅನೇಕ ಬೋಧನೆಗಳಿವೆ. ಸತಿಪಠ್ಠಾನ ಸುತ್ತ, ಅನಾಪಾನಸತಿ ಸುತ್ತ, ಅಲಗದ್ದೂಪಮ ಸುತ್ತ, ಚೂಳವೇದಳ್ಳ ಸುತ್ತವಾಗಿದೆ. ಸತಿಪಠ್ಠಾನ ಬೋಧನೆಯ ಮೂಲಕ ದೇಹ, ವೇದನೆ, ಚಿತ್ತ ಮತ್ತು ಧಮ್ಮಗಳ ಕುರಿತು ಜಾಗೃತ ಅವಲೋಕನವನ್ನು ಬೆಳೆಸುವ ವಿಧಾನವನ್ನು ವಿವರಿಸಲಾಗಿರುತ್ತದೆ. ಇದರಿಂದ ಬೌದ್ಧಧಮ್ಮದಲ್ಲಿ ಸ್ಮೃತಿ ಅಥವಾ ಸತಿಗೆ ನೀಡಿರುವ ಮಹತ್ವ ಸ್ಪಷ್ಟವಾಗುತ್ತದೆ. ಮಜ್ಝಿಮ ನಿಕಾಯವು ಅತಿಯಾದ ಇಂದ್ರಿಯಸುಖ ಮತ್ತು ಅತಿಯಾದ ಆತ್ಮಪೀಡನೆ ಎರಡನ್ನೂ ತಿರಸ್ಕರಿಸಿ ಮಧ್ಯಮ ಮಾರ್ಗವನ್ನು ಪ್ರತಿಪಾದಿಸುತ್ತದೆ. ಈ ದೃಷ್ಟಿಕೋನವು ಬೌದ್ಧ ನೈತಿಕತೆಯ ಕೇಂದ್ರಭೂತ ಅಂಶವಾಗಿರುತ್ತದೆ.

**ಸಂಯುತ್ತ ನಿಕಾಯ:** ಸಂಯುತ್ತ ನಿಕಾಯ ಎಂದರೆ; ವಿಷಯಾನುಸಾರವಾಗಿ ಸಂಪರ್ಕಿಸಲಾದ ಪ್ರವಚನಗಳ ಸಂಗ್ರಹವಾಗಿದೆ. ಇಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದ ಸುತ್ತಗಳನ್ನು ಗುಂಪುಗಳಾಗಿ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ ಖಂಧಗಳು, ಆಯತನಗಳು, ಧಾತುಗಳು, ಇಂದ್ರಿಯಗಳು, ಬೋಜ್ಝಂಗಗಳು, ಸತ್ಯಗಳು ಮತ್ತು ಪ್ರತೀತ್ಯಸಮುತ್ಪಾದಂತಹ ಪ್ರಮುಖ ಬೌದ್ಧ ಪರಿಕಲ್ಪನೆಗಳ ಕುರಿತು ಚರ್ಚೆ ಕಂಡುಬರುತ್ತದೆ. ಅದರಲ್ಲಿಯೂ ಪ್ರತೀತ್ಯಸಮುತ್ಪಾದದ ವಿವರಣೆ ಬೌದ್ಧ ತತ್ವಶಾಸ್ತ್ರದ ಪ್ರಮುಖ ಅಂಶವಾಗಿದೆ. ಯಾವುದೇ ಘಟನೆ ಅಥವಾ ಅನುಭವವು ಸ್ವತಂತ್ರವಾಗಿ ಉಂಟಾಗುವುದಿಲ್ಲ; ವಿವಿಧ ಕಾರಣಗಳು ಮತ್ತು ಪರಿಸ್ಥಿತಿಗಳ ಪರಸ್ಪರ ಅವಲಂಬನೆಯಿಂದ ಅದು ಉಂಟಾಗುತ್ತದೆ ಎಂಬ ತತ್ವವನ್ನು ಇದು ವಿವರಿಸುತ್ತದೆ. ಸಂಯುತ್ತ ನಿಕಾಯವು ಬೌದ್ಧಧಮ್ಮದ ತತ್ವಶಾಸ್ತ್ರೀಯ ಮತ್ತು ಮನೋವೈಜ್ಞಾನಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ಬಹಳ ಮುಖ್ಯವಾದ ಮೂಲವಾಗಿದೆ.

**ಅಂಗುತ್ತರ ನಿಕಾಯ:** ಅಂಗುತ್ತರ ನಿಕಾಯವು ಸಂಖ್ಯಾತ್ಮಕ ಕ್ರಮದಲ್ಲಿ ಧಮ್ಮ ಬೋಧನೆಗಳನ್ನು ವ್ಯವಸ್ಥೆಗೊಳಿಸಿರುವ ವಿಶಿಷ್ಟ ಸಂಕಲನವಾಗಿದೆ. ಒಂದು

ಅಂಶದಿಂದ ಆರಂಭಿಸಿ ಕ್ರಮೇಣ ಎರಡು, ಮೂರು, ನಾಲ್ಕು ಹೀಗೆ ಹೆಚ್ಚಿನ ಸಂಖ್ಯೆಗಳ ಆಧಾರದ ಮೇಲೆ ಬೋಧನೆಗಳನ್ನು ವರ್ಗೀಕರಿಸಲಾಗಿದೆ. ಏಕಕ ಧಮ್ಮಗಳು, ದ್ವಯ ಧಮ್ಮಗಳು, ತ್ರಿಕ ಧಮ್ಮಗಳು, ಚತುಷ್ಕ ಧಮ್ಮಗಳು, ಪಂಚಕ ಧಮ್ಮಗಳು, ಷಟ್ಕ ಧಮ್ಮಗಳು, ಸಪ್ತಕ ಧಮ್ಮಗಳು, ಅಷ್ಟಕ ಧಮ್ಮಗಳು, ನವಕ ಧಮ್ಮಗಳು, ದಶಕ ಧಮ್ಮಗಳು. ಈ ರೀತಿಯ ಸಂಖ್ಯಾತ್ಮಕ ವ್ಯವಸ್ಥೆಯು ಗುರು ಬುದ್ಧರ ಬೋಧನೆಗಳನ್ನು ನೆನಪಿಟ್ಟುಕೊಳ್ಳಲು ಮತ್ತು ಬೋಧಿಸಲು ಸಹಾಯಕವಾಗಿತ್ತು. ಅಂಗುತ್ತರ ನಿಕಾಯದಲ್ಲಿ ನೈತಿಕ ಜೀವನ, ಗೃಹಸ್ಥರ ಕರ್ತವ್ಯಗಳು, ಮನಸ್ಸಿನ ನಿಯಂತ್ರಣ, ಸಾಮಾಜಿಕ ಸಂಬಂಧಗಳು, ಧ್ಯಾನ ಮತ್ತು ಜ್ಞಾನಕ್ಕೆ ಸಂಬಂಧಿಸಿದ ಅನೇಕ ಬೋಧನೆಗಳಿವೆ. ಆದ್ದರಿಂದ ಸಾಮಾನ್ಯ ಜನರ ದೈನಂದಿನ ಜೀವನಕ್ಕೆ ಸಂಬಂಧಿಸಿದ ಬೌದ್ಧಧಮ್ಮವನ್ನು ಅರ್ಥಮಾಡಿಕೊಳ್ಳಲು ಇದು ವಿಶೇಷವಾಗಿ ಉಪಯುಕ್ತವಾಗಿದೆ.

**ಖುದ್ದಕ ನಿಕಾಯ:** ಖುದ್ದಕ ನಿಕಾಯವನ್ನು ಸಣ್ಣ ಅಥವಾ ವೈವಿಧ್ಯಮಯ ಸಂಕಲನ ಎಂದು ಅರ್ಥೈಸಬಹುದು. ಆದರೆ ಹೆಸರಿನಲ್ಲಿ ಖುದ್ದಕ ಎಂಬ ಪದವಿದ್ದರೂ ಇದರೊಳಗಿನ ಸಾಹಿತ್ಯವು ಬಹಳ ವಿಶಾಲ ಮತ್ತು ವೈವಿಧ್ಯಮಯವಾಗಿದೆ. ಇದರಲ್ಲಿ ವಿವಿಧ ರೀತಿಯ ಪಾಳಿ ಬೌದ್ಧ ಸಾಹಿತ್ಯ ಕೃತಿಗಳು ಸೇರಿವೆ. ಪ್ರಮುಖವಾಗಿ; ಧಮ್ಮಪದ, ಉದಾನ, ಇತಿವುತ್ತಕ, ಸುತ್ತನಿಪಾತ, ಥೇರಗಾಥಾ, ಥೇರೀಗಾಥಾ, ಜಾತಕ, ಬುದ್ಧವಂಸ, ಚರಿಯಾಪಿಟಕವು ಹೆಚ್ಚು ಪ್ರಸಿದ್ಧವಾಗಿವೆ.

**ಧಮ್ಮಪದ:** ಧಮ್ಮಪದವು ಬೌದ್ಧ ನೈತಿಕ ಚಿಂತನೆಯ ಅತ್ಯಂತ ಪ್ರಸಿದ್ಧ ಕೃತಿಗಳಲ್ಲಿ ಒಂದಾಗಿದೆ. ಮನಸ್ಸಿನ ಶುದ್ಧತೆ, ಅಹಿಂಸೆ, ಆತ್ಮನಿಯಂತ್ರಣ, ಜ್ಞಾನ, ಕರ್ಮ ಮತ್ತು ನೈತಿಕ ಜೀವನದ ಕುರಿತು ಸಂಕ್ಷಿಪ್ತವಾದ ಆದರೆ ಗಂಭೀರವಾದ ಬೋಧನೆಗಳನ್ನು ಇದು ಒಳಗೊಂಡಿದೆ.

**ಜಾತಕ:** ಜಾತಕ ಕಥೆಗಳು ಗುರು ಬುದ್ಧರ ಕಥನಗಳಾಗಿರುತ್ತವೆ. ಇವುಗಳ ಮೂಲಕ ದಾನ, ಶೀಲ, ತ್ಯಾಗ, ಸತ್ಯ, ಕರುಣೆ ಮತ್ತು ಪ್ರಜ್ಞೆ ಮುಂತಾದ ನೈತಿಕ ಮೌಲ್ಯಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ತಿಳಿಸಲಾಗಿದೆ.

**ಥೇರಗಾಥಾ ಮತ್ತು ಥೇರೀಗಾಥಾ:** ಥೇರಗಾಥಾ ಭಿಕ್ಷುಗಳ ಅನುಭವಗಳನ್ನು ಹಾಗೂ ಥೇರೀಗಾಥಾ ಭಿಕ್ಷುಣಿಯರ ಆಧ್ಯಾತ್ಮಿಕ ಅನುಭವಗಳನ್ನು ವ್ಯಕ್ತಪಡಿಸುವ ಪದ್ಯಸಂಕಲನಗಳಾಗಿವೆ. ವಿಶೇಷವಾಗಿ ಥೇರೀಗಾಥಾ ಪ್ರಾಚೀನ ಬೌದ್ಧ ಮಹಿಳೆಯರ ಆಧ್ಯಾತ್ಮಿಕ ಸಾಮರ್ಥ್ಯ ಮತ್ತು ಬಿಡುಗಡೆಯ ಅನುಭವಗಳನ್ನು ತಿಳಿಸುವ ಮಹತ್ವದ ಸಾಹಿತ್ಯ ಮೂಲವಾಗಿದೆ.

**ಸುತ್ತ ಪಿಟಕದಲ್ಲಿನ ಪ್ರಮುಖ ತಾತ್ವಿಕ ವಿಚಾರಗಳು**

**ನಾಲ್ಕು ಶ್ರೇಷ್ಠ ಸತ್ಯಗಳು:** ಸುತ್ತ ಪಿಟಕದ ಪ್ರಮುಖ ತಾತ್ವಿಕ ಆಧಾರವೆಂದರೆ; ನಾಲ್ಕು ಶ್ರೇಷ್ಠ ಸತ್ಯಗಳು; ದುಃಖ, ದುಃಖದ ಸಮುದಯ ಅಥವಾ ಕಾರಣ, ದುಃಖದ ನಿರೋಧ, ದುಃಖನಿರೋಧಕ್ಕೆ ದಾರಿಯಾದ ಮಾರ್ಗವಾಗಿದೆ. ಮಾನವ ಜೀವನದಲ್ಲಿ ದುಃಖವಿದೆ ಎಂಬುದನ್ನು ಗುರುತಿಸುವುದರೊಂದಿಗೆ ಗುರು ಬುದ್ಧರು ವಿಶ್ಲೇಷಣೆ ನಿಲ್ಲುವುದಿಲ್ಲ. ದುಃಖಕ್ಕೆ ಕಾರಣವಿದೆ ಮತ್ತು ಅದರ ನಿವಾರಣೆಯೂ ಸಾಧ್ಯ ಎಂಬ ಆಶಾವಾದವನ್ನು ಬೌದ್ಧಧಮ್ಮ ಪ್ರತಿಪಾದಿಸುತ್ತದೆ.

**ಅಷ್ಟಾಂಗಿಕ ಮಾರ್ಗ:** ದುಃಖನಿರೋಧಕ್ಕೆ ಬುದ್ಧಗುರು ಸೂಚಿಸಿದ ಮಾರ್ಗವೇ ಅಷ್ಟಾಂಗಿಕ ಮಾರ್ಗ; ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್, ಸಮ್ಯಕ್ ಕರ್ಮ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ, ಸಮ್ಯಕ್ ಸಮಾಧಿ. ಇದು ನೈತಿಕತೆ, ಮಾನಸಿಕ ಶಿಸ್ತು ಮತ್ತು ಜ್ಞಾನವನ್ನು ಸಮನ್ವಯಗೊಳಿಸುವ ಜೀವನ ಮಾರ್ಗವಾಗಿದೆ.

**ಅನಿತ್ಯತೆ:** ಸುತ್ತ ಪಿಟಕದಲ್ಲಿ ಎಲ್ಲಾ ಸಂಸ್ಕೃತ ವಸ್ತುಗಳು ಬದಲಾವಣೆಗೆ ಒಳಪಡುತ್ತವೆ ಎಂಬ ಅನಿತ್ಯತೆಯ

ತತ್ವವನ್ನು ಒತ್ತಿಹೇಳಲಾಗಿದೆ. ಯಾವುದೂ ಶಾಶ್ವತವಲ್ಲ ಎಂಬ ಅರಿವು ಆಸಕ್ತಿ ಮತ್ತು ಅಂಟಿಕೊಳ್ಳುವಿಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಅನಾತ್ಮ:** ಬೌದ್ಧ ಚಿಂತನೆಯ ಮತ್ತೊಂದು ಪ್ರಮುಖ ಅಂಶವೆಂದರೆ; ಅನಾತ್ಮವಾದ. ಶಾಶ್ವತ, ಬದಲಾಗದ ಆತ್ಮ ಎಂಬ ಕಲ್ಪನೆಯನ್ನು ಗುರು ಬುದ್ಧರು ಪ್ರಶ್ನಿಸುತ್ತಾರೆ. ವ್ಯಕ್ತಿಯ ಅನುಭವವನ್ನು ರೂಪಿಸುವ ದೇಹ, ಭಾವನೆ, ಸಂಜ್ಞೆ, ಸಂಸ್ಕಾರ ಮತ್ತು ವಿಜ್ಞಾನ ಎಂಬ ಪಂಚಸ್ಕಂಧಗಳು ನಿರಂತರ ಬದಲಾವಣೆಗೆ ಒಳಗಾಗುತ್ತವೆ.

**ಪ್ರತೀತ್ಯಸಮುತ್ಪಾದ:** ಕಾರಣ–ಕಾರ್ಯ ಸಂಬಂಧವನ್ನು ವಿವರಿಸುವ ಪ್ರತೀತ್ಯಸಮುತ್ಪಾದವು ಬೌದ್ಧ ತತ್ವದ ಮೂಲಭೂತ ಪರಿಕಲ್ಪನೆಯಾಗಿದೆ. ಅಜ್ಞಾನದಿಂದ ಸಂಸ್ಕಾರ, ಸಂಸ್ಕಾರದಿಂದ ವಿಜ್ಞಾನವು ಪರಸ್ಪರ ಅವಲಂಬಿತ ಕಾರಣಗಳ ಸರಪಳಿಯ ಮೂಲಕ ದುಃಖದ ಉತ್ಪತ್ತಿಯನ್ನು ವಿವರಿಸಲಾಗುತ್ತದೆ.

**ಸುತ್ತ ಪಿಟಕದ ನೈತಿಕ ಚಿಂತನೆ:** ಸುತ್ತ ಪಿಟಕವು ವ್ಯಕ್ತಿಯ ನೈತಿಕ ಪರಿವರ್ತನೆಗೆ ಹೆಚ್ಚಿನ ಮಹತ್ವ ನೀಡುತ್ತದೆ. ಪಂಚಶೀಲಗಳು ಗೃಹಸ್ಥರ ನೈತಿಕ ಜೀವನಕ್ಕೆ ಪ್ರಮುಖ ಮಾರ್ಗದರ್ಶಕವಾಗಿವೆ. ಪ್ರಾಣಿಹಿಂಸೆ ಮಾಡದಿರುವುದು, ಕಳವು ಮಾಡದಿರುವುದು, ಕಾಮದ ದುರುಪಯೋಗದಿಂದ ದೂರವಿರುವುದು, ಸುಳ್ಳು ಹೇಳದಿರುವುದು, ಮದ್ಯ ಮತ್ತು ಮತ್ತಪದಾರ್ಥಗಳಿಂದ ದೂರವಿರುವುದು. ಇವು ವ್ಯಕ್ತಿಯ ನಡವಳಿಕೆಯನ್ನು ಮಾತ್ರ ನಿಯಂತ್ರಿಸುವ ನಿಯಮಗಳಲ್ಲ; ಶಾಂತಿಯುತ ಮತ್ತು ಹೊಣೆಗಾರಿಕೆಯುತ ಸಮಾಜ ನಿರ್ಮಾಣಕ್ಕೆ ಸಹಾಯಕವಾದ ನೈತಿಕ ಮೌಲ್ಯಗಳಾಗಿವೆ.

**ಸಾಮಾಜಿಕ ಚಿಂತನೆ:** ಸುತ್ತ ಪಿಟಕದ ಮಹತ್ವವು ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಗುರು ಬುದ್ಧರ ಸಾಮಾಜಿಕ ಸಂಬಂಧಗಳು, ಕುಟುಂಬ, ಆಡಳಿತ, ಆರ್ಥಿಕ ಜೀವನ ಮತ್ತು ಮಾನವೀಯ ಸಮಾನತೆಯ ಕುರಿತೂ ಚಿಂತಿಸಿದ್ದಾನೆ. ಗುರು ಬುದ್ಧರ ಬೋಧನೆಯಲ್ಲಿ ವ್ಯಕ್ತಿಯ ಮೌಲ್ಯವನ್ನು ಜನ್ಮಕ್ಕಿಂತ ಆಚರಣೆ ಮತ್ತು ನೈತಿಕ ಗುಣಗಳ ಆಧಾರದ ಮೇಲೆ ಅರ್ಥಮಾಡಿಕೊಳ್ಳುವ ಪ್ರವೃತ್ತಿ ಕಂಡುಬರುತ್ತದೆ. ಜಾತಿ ಮತ್ತು ಸಾಮಾಜಿಕ ಸ್ಥಾನಮಾನಕ್ಕಿಂತ ಶೀಲ, ಕರ್ಮ ಮತ್ತು ಜ್ಞಾನಕ್ಕೆ ಮಹತ್ವ ನೀಡಲಾಗಿದೆ. ಸಿಗಾಲೋವಾದ ಸುತ್ತದಲ್ಲಿ ಕುಟುಂಬ ಮತ್ತು ಸಮಾಜದ ವಿವಿಧ ಸದಸ್ಯರ ಪರಸ್ಪರ ಕರ್ತವ್ಯಗಳನ್ನು ವಿವರಿಸಿರುವುದು ಬೌದ್ಧ ಸಾಮಾಜಿಕ ಚಿಂತನೆಯ ಪ್ರಾಯೋಗಿಕ ಸ್ವರೂಪವನ್ನು ತೋರಿಸುತ್ತದೆ.

**ಮಹಿಳೆಯರ ಸ್ಥಾನ:** ಸುತ್ತ ಪಿಟಕದಲ್ಲಿರುವ ಥೇರೀಗಾಥಾ ಮತ್ತು ಇತರ ಸುತ್ತಗಳ ಮೂಲಕ ಪ್ರಾಚೀನ ಬೌದ್ಧ ಪರಂಪರೆಯಲ್ಲಿ ಮಹಿಳೆಯರ ಆಧ್ಯಾತ್ಮಿಕ ಸಾಮರ್ಥ್ಯಕ್ಕೆ ದೊರೆತ ಮಾನ್ಯತೆಯನ್ನು ಗುರುತಿಸಬಹುದು. ಮಹಿಳೆಯರೂ ಧಮ್ಮವನ್ನು ಅನುಸರಿಸಿ ಜ್ಞಾನ ಮತ್ತು ಬಿಡುಗಡೆಯನ್ನು ಸಾಧಿಸಬಹುದು ಎಂಬ ವಿಚಾರವು ಬೌದ್ಧ ಪರಂಪರೆಯ ಗಮನಾರ್ಹ ಅಂಶವಾಗಿದೆ. ಥೇರೀಗಾಥಾದಲ್ಲಿ ಭಿಕ್ಷುಣಿಯರ ವೈಯಕ್ತಿಕ ಅನುಭವಗಳು, ದುಃಖದಿಂದ ಬಿಡುಗಡೆಯ ಪ್ರಯತ್ನ ಮತ್ತು ಆಧ್ಯಾತ್ಮಿಕ ಸಾಧನೆಯ ಪ್ರತಿಫಲನ ಕಂಡುಬರುತ್ತದೆ. ಇದರಿಂದ ಮಹಿಳೆಯರ ಧಾರ್ಮಿಕ ಅನುಭವಗಳನ್ನು ದಾಖಲಿಸಿದ ಪ್ರಾಚೀನ ಸಾಹಿತ್ಯ ಪರಂಪರೆಯಾಗಿ ಇದರ ಮಹತ್ವ ಹೆಚ್ಚುತ್ತದೆ.

**ಸುತ್ತ ಪಿಟಕದ ಐತಿಹಾಸಿಕ ಮಹತ್ವ:** ಸುತ್ತ ಪಿಟಕವು ಪ್ರಾಚೀನ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಇತಿಹಾಸವನ್ನು ಅಧ್ಯಯನ ಮಾಡಲು ಸಹಾಯಕವಾದ ಪ್ರಮುಖ ಮೂಲವಾಗಿದೆ. ಇದರಲ್ಲಿ ರಾಜರು, ಬ್ರಾಹ್ಮಣರು, ಶ್ರಮಣರು, ವ್ಯಾಪಾರಿಗಳು, ರೈತರು, ಗೃಹಸ್ಥರು, ಮಹಿಳೆಯರು ಮತ್ತು ವಿವಿಧ ಸಾಮಾಜಿಕ ವರ್ಗಗಳ ಉಲ್ಲೇಖಗಳು ಕಂಡುಬರುತ್ತವೆ. ಇದರ ಮೂಲಕ ಆ ಕಾಲದ; ಧಾರ್ಮಿಕ ಚಿಂತನೆಗಳು, ಸಾಮಾಜಿಕ ಸಂಬಂಧಗಳು,

ಆರ್ಥಿಕ ಚಟುವಟಿಕೆಗಳು, ನಗರ ಜೀವನ, ರಾಜಕೀಯ ವ್ಯವಸ್ಥೆ, ಕುಟುಂಬ ಸಂಬಂಧಗಳು, ವಿವಿಧ ಧಾರ್ಮಿಕ ಪಂಥಗಳಂತಹ ವಿಷಯಗಳ ಕುರಿತು ಮಾಹಿತಿ ಪಡೆಯಬಹುದು. ಆದಾಗ್ಯೂ, ಸುತ್ತ ಪಿಟಕವನ್ನು ನೇರ ಐತಿಹಾಸಿಕ ದಾಖಲೆಯಾಗಿ ಬಳಸುವಾಗ ಅದರ ಧಾರ್ಮಿಕ ಮತ್ತು ಸಾಹಿತ್ಯಿಕ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ವಿಮರ್ಶಾತ್ಮಕ ಮೂಲ ವಿಶ್ಲೇಷಣೆ ನಡೆಸುವುದು ಅಗತ್ಯವಾಗಿದೆ.

**ಸುತ್ತ ಪಿಟಕದ ಸಾಹಿತ್ಯಿಕ ಮಹತ್ವ:** ಸುತ್ತ ಪಿಟಕದ ಸಾಹಿತ್ಯವು ಒಂದೇ ರೀತಿಯದ್ದಲ್ಲ. ಇಲ್ಲಿ ಸಂವಾದ, ಪ್ರಶ್ನೋತ್ತರ, ಕಥೆ, ಉಪಮೆ, ನೀತಿಕಥೆ, ಪದ್ಯ ಮತ್ತು ತಾತ್ವಿಕ ವಿವರಣೆಗಳಂತಹ ವಿವಿಧ ಸಾಹಿತ್ಯ ಪ್ರಕಾರಗಳನ್ನು ಕಾಣಬಹುದು. ಗುರು ಬುದ್ಧರ ಬೋಧನೆಗಳನ್ನು ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಮಾಡಲು ಉಪಮೆ ಮತ್ತು ದೃಷ್ಟಾಂತಗಳ ಬಳಕೆ ವ್ಯಾಪಕವಾಗಿದೆ. ಇದರಿಂದ ಬೌದ್ಧ ಸಾಹಿತ್ಯವು ಕೇವಲ ತತ್ವಶಾಸ್ತ್ರೀಯ ಚರ್ಚೆಯಾಗಿ ಉಳಿಯದೆ ಜನಸಾಮಾನ್ಯರ ಜೀವನಕ್ಕೆ ಹತ್ತಿರವಾದ ನೈತಿಕ ಸಾಹಿತ್ಯವಾಗಿ ಬೆಳೆಯಿತು.

**ಸುತ್ತ ಪಿಟಕ ಮತ್ತು ಮಾನವ ಬಿಡುಗಡೆ:** ಸುತ್ತ ಪಿಟಕದ ಅಂತಿಮ ಗುರಿ ಕೇವಲ ಉತ್ತಮ ಸಾಮಾಜಿಕ ಜೀವನವನ್ನು ರೂಪಿಸುವುದಲ್ಲ; ದುಃಖದಿಂದ ಸಂಪೂರ್ಣ ಬಿಡುಗಡೆಯನ್ನು ಸಾಧಿಸುವುದು. ಗುರು ಬುದ್ಧರ ಪ್ರಕಾರ; ಅಜ್ಞಾನ, ತೃಷ್ಣೆ ಮತ್ತು ಆಸಕ್ತಿಗಳು ದುಃಖದ ಪ್ರಮುಖ ಕಾರಣಗಳಾಗಿವೆ. ಜ್ಞಾನ, ಸ್ಮೃತಿ, ಧ್ಯಾನ ಮತ್ತು ನೈತಿಕ ಜೀವನದ ಮೂಲಕ ಅವುಗಳನ್ನು ನಿವಾರಿಸಿದಾಗ ನಿಬ್ಬಾಣದ ಸ್ಥಿತಿಯನ್ನು ಸಾಧಿಸಬಹುದು. ಸುತ್ತ ಪಿಟಕವು ವ್ಯಕ್ತಿಯ ನೈತಿಕ ಪರಿವರ್ತನೆಯಿಂದ ಮಾನಸಿಕ ಪರಿವರ್ತನೆಗೆ ಮತ್ತು ಅಲ್ಲಿಂದ ಆಧ್ಯಾತ್ಮಿಕ ಬಿಡುಗಡೆಗೆ ಸಾಗುವ ಮಾರ್ಗವನ್ನು ನಿರೂಪಿಸುತ್ತದೆ.

**ಉಪಸಂಹಾರ**

ಸುತ್ತ ಪಿಟಕವು ಬೌದ್ಧ ತ್ರಿಪಿಟಕದ ಅತ್ಯಂತ ಮಹತ್ವದ ಅಂಗಗಳಲ್ಲಿ ಒಂದಾಗಿದ್ದು, ಬುದ್ಧರ ಧಮ್ಮದ ನೈತಿಕ, ತಾತ್ವಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಆಯಾಮಗಳನ್ನು ಸಮಗ್ರವಾಗಿ ಪರಿಚಯಿಸುತ್ತದೆ. ದೀಘ, ಮಜ್ಜಿಮ, ಸಂಯುತ್ತ, ಅಂಗುತ್ತರ ಮತ್ತು ಖುದ್ದಕ ನಿಕಾಯಗಳ ಮೂಲಕ ವಿವಿಧ ರೀತಿಯ ಧಮ್ಮೋಪದೇಶಗಳು ಸಂಗ್ರಹಗೊಂಡಿವೆ. ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗಿಕ ಮಾರ್ಗ, ಮಧ್ಯಮ ಮಾರ್ಗ, ಅನಿತ್ಯತೆ, ಅನಾತ್ಮ, ಪ್ರತೀತ್ಯಸಮುತ್ಪಾದ, ಶೀಲ, ಧ್ಯಾನ, ಕರುಣೆ ಮತ್ತು ನಿಬ್ಬಾಣಯಂತಹ ಪರಿಕಲ್ಪನೆಗಳು ಸುತ್ತ ಪಿಟಕದ ಕೇಂದ್ರಬಿಂದುಗಳಾಗಿವೆ. ಇದೇ ಸಂದರ್ಭದಲ್ಲಿ ಕುಟುಂಬ, ಸಮಾಜ, ಮಹಿಳೆಯರು, ನೈತಿಕ ಹೊಣೆಗಾರಿಕೆ ಮತ್ತು ಸಾಮಾಜಿಕ ಸಂಬಂಧಗಳ ಕುರಿತು ನೀಡಿರುವ ಬೋಧನೆಗಳು ಇದರ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸುತ್ತವೆ. ಆದ್ದರಿಂದ ಸುತ್ತ ಪಿಟಕವನ್ನು ಗುರು ಬುದ್ಧರ ಉಪದೇಶಗಳ ಸಂಕಲನ ಮಾತ್ರವಲ್ಲದೆ, ವ್ಯಕ್ತಿಯ ನೈತಿಕ ಮತ್ತು ಮಾನಸಿಕ ಪರಿವರ್ತನೆಯ ಮೂಲಕ ಸಮಾನತೆ, ಕರುಣೆ ಮತ್ತು ಶಾಂತಿಯುತ ಸಮಾಜದ ನಿರ್ಮಾಣವನ್ನು ಗುರಿಯಾಗಿಟ್ಟುಕೊಂಡಿರುವ ಸಮಗ್ರ ಜೀವನದರ್ಶನವೆಂದು ಪರಿಗಣಿಸಬಹುದು. ಬೌದ್ಧಧಮ್ಮದ ಮೂಲಭೂತ ಸಿದ್ಧಾಂತಗಳನ್ನು ಅಧ್ಯಯನ ಮಾಡುವುದಕ್ಕೂ, ಪ್ರಾಚೀನ ಭಾರತದ ಧಾರ್ಮಿಕ–ಸಾಮಾಜಿಕ ಇತಿಹಾಸವನ್ನು ಪುನರ್ನಿರ್ಮಿಸುವುದಕ್ಕೂ ಸುತ್ತ ಪಿಟಕವು ಅತ್ಯಂತ ಮೌಲ್ಯಯುತವಾದ ಪ್ರಾಥಮಿಕ ಸಾಹಿತ್ಯ ಮೂಲವಾಗಿದೆ.

**ಪರಾಮರ್ಶನ ಗ್ರಂಥಗಳು**


- *ಭಂತೇ ಆನಂದ ಕೌಸಲ್ಯಾಯನ.* ಬುದ್ಧ ಧಮ್ಮ ಮತ್ತು ಸಂಘ, ಭಾರತೀಯ ಬೌದ್ಧ ಮಹಾಸಭಾ.

- *ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು–ಸಂಪುಟ–10.* (2015). ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಗೋಪಾಲಕೃಷ್ಣ ಅಡಿಗ. *ಬೌದ್ಧಧರ್ಮದ ಪರಿಚಯ.* ಕನ್ನಡ ಸಾಹಿತ್ಯ ಪರಿಷತ್ತು.
- ಜೋಶಿ, ಎಚ್.ಎಸ್. *ಭಾರತದಲ್ಲಿ ಬೌದ್ಧಧರ್ಮ.* ಕನ್ನಡ ವಿಶ್ವವಿದ್ಯಾಲಯ.
- ನರಸಿಂಹಯ್ಯ, ಎಚ್. *ಬುದ್ಧನ ಜೀವನ ಮತ್ತು ಬೋಧನೆಗಳು*, ಕನ್ನಡ ಸಾಹಿತ್ಯ ಪರಿಷತ್ತು.
- ರಾಹುಲ್ ಸಾಂಕೃತ್ಯಾಯನ. (ಅನು.). *ಬೌದ್ಧ ಸಂಸ್ಕೃತಿ.* ಕನ್ನಡ ಪುಸ್ತಕ ಪ್ರಾಧಿಕಾರ.
- ಶಾಂತಿನಾಥ ದೇಸಾಯಿ. *ಬೌದ್ಧಧರ್ಮ* ಮತ್ತು *ಭಾರತೀಯ ಸಂಸ್ಕೃತಿ.* ಕನ್ನಡ ವಿಶ್ವವಿದ್ಯಾಲಯ.
- ಶಿವರಾಮ ಕಾರಂತ, ಕೆ. *ಭಾರತೀಯ ಸಂಸ್ಕೃತಿ* ಮತ್ತು *ಬೌದ್ಧಧರ್ಮ.* ಕನ್ನಡ ಸಾಹಿತ್ಯ ಪರಿಷತ್ತು.